ಅ) ಮಂಡಳಿಯ ಕಾರ್ಯ ವ್ಯಾಪ್ತಿಗೆ ಘೋಷಿತ ಕೊಳಚೆ ಪ್ರದೇಶಗಳು ಮಾತ್ರ ಸೀಮಿತಗೊಂಡಿದ್ದು ಘೋಷಿತವಲ್ಲದ ಪ್ರದೇಶಗಳಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಳ್ಳಲು ಬರುವುದಿಲ್ಲ. ಈ ಸ್ಥಳಗಳನ್ನು ಮಂಡಳಿಯ ಅಧಿಕಾರಿಗಳು ಇತ್ತೀಚೆಗೆ ತನಿಖೆ ನಡೆಸಿದ್ದು ಘೋಷಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಘೋಷಣೆಯಾದ ನಂತರ ಅಭಿವೃದ್ಧಿಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಇ) 1998-99ನೇ ಸಾಲಿನ ಆಯವ್ಯಯವನ್ನು ಇನ್ನು ಮಂಡಳಿಗೆ ನಿಗದಿಪಡಿಸಿಲ್ಲವಾದ ಕಾರಣ ಕ್ರಿಯಾಯೋಜನೆಯನ್ನು ಇನ್ನು ತಯಾರಿಸಿರುವುದಿಲ್ಲ. ಸರ್ಕಾರವು ಮಂಡಳಿಗೆ ನಿಗದಿಪಡಿಸಲಿರುವ ಆಯವ್ಯಯದ ಅನುಧಾನ ಆಧರಿಸಿ ಈ ಪಟ್ಟಣದ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಆಧ್ಯತೆ ಮೇರೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಕಿತ್ತೂರು ರಾಣಿ ಚೆನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯಕ್ಕೆ ಅನುದಾನ ಕಡಿತಗೊಳಿಸಿರುವುದು

612 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳು ಯಾವ ವರ್ಷದಿಂದ ಪ್ರಾರಂಭಿಸಲಾಗಿದೆ. ಅವು ಈ ವಿಶ್ವವಿದ್ಯಾಲಯಕ್ಕೆ ಒಳಪಟ್ಟಂತೆ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ವಿಷಯಗಳ ಬಗ್ಗೆ ಬೋಧನೆಗಾಗಿ ನಿಗದಿ ಪಡಿಸಿದ ಅಭ್ಯರ್ಥಿಗಳ ಸಂಖ್ಯೆ ಎಷ್ಟು?*

ಆ) *ಬೇರೆ ಬೇರೆ ವಿಷಯಗಳ ಬೋಧನೆಗಾಗಿ ಪ್ರಾರಂಭಿಸಲಾಗಿರುವ ಈ ಮಹಾವಿದ್ಯಾಲಯಗಳು ಯಾವ ಯಾವ ಅನುಕೂಲತೆಗಳನ್ನು ವಿದ್ಯಾರ್ಥಿಗಳಿಗಾಗಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಾಗಿ ಸೌಲಭ್ಯಗಳನ್ನು ಕಲ್ಪಿಸಿವೆ?*

ಇ) *ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ ಅರಭಾವಿ ಇದರ ಐದು ವರ್ಷಗಳ ನಿರ್ವಹಣೆಗಾಗಿ ಮತ್ತು ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಗೊತ್ತು ಮಾಡಲಾಗಿತ್ತು. ಅದರಲ್ಲಿ ಎಷ್ಟು ಹಣ ವಿನಿಯೋಗಿಸಿದೆ. ಪ್ರತಿವರ್ಷ ಗೊತ್ತು ಮಾಡಿದ್ದ ಅನುದಾನವನ್ನು ಕಡಿತ ಮಾಡಲಾಗಿದೆಯೇ ಹಾಗಿದ್ದಲ್ಲಿ ಕಾರಣಗಳೇನು?*

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :

ಅ) ಬೆಂಗಳೂರು ವಿಶ್ವವಿದ್ಯಾನಿಲಯ 1964ನೇ ಇಸವಿಯಲ್ಲಿ ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯ ದಿನಾಂಕ 1-10-1986 ರಿಂದ ಪ್ರಾರಂಭಗೊಂಡಿವೆ. ಇತರೆ ವಿವರಗಳನ್ನು ಲಗತ್ತಿಸಿದೆ.

ಆ) ಪ್ರತಿಯೊಂದು ಮಹಾವಿದ್ಯಾಲಯ ಆವರಣದಲ್ಲಿ ವಿದ್ಯಾರ್ಥಿಗಳಿಗೆ ವಸತಿ ನಿಲಯ, ಗ್ರಂಥಾಲಯ ಆರೋಗ್ಯ ಕೇಂದ್ರ, ಆಟದ ಮೈದಾನ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಗಿದೆ. ಬೋಧಕೇತರ ಸಿಬ್ಬಂದಿಗಳು ಸರಕಾರದ ನಿಯಮಾವಳಿಯ ಪ್ರಕಾರ ಪಡೆಯಬಹುದಾದ ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಬೋಧಕ ಸಿಬ್ಬಂದಿಗೆ ಯು.ಜಿ.ಸಿ. ವೇತನ ಶ್ರೇಣಿ ನೀಡಲಾಗುತ್ತಿದೆ.

೫) ಸರ್ಕಾರಿ ಆದೇಶ ಸಂಖ್ಯೆ ಕೃತೋಇ 172 ಕೃವಿವಿ 92, ಬೆಂಗಳೂರು ದಿನಾಂಕ 6-7-1994ರ ಪ್ರಕಾರ ಒಟ್ಟು ನಾಲ್ಕು ವರ್ಷಗಳ ಅವಧಿಗೆ ಅಂದಾಜು ವೆಚ್ಚ ರೂ. 887.51 ಲಕ್ಷಗಳೊಂದಿಗೆ 1994-95 ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗಿದೆ ಈಗ ಒಟ್ಟು ರೂ. 263.72 ಲಕ್ಷ ಖರ್ಚು ಮಾಡಲಾಗಿದ್ದು ರೂ. 263.72 ಲಕ್ಷ ಖರ್ಚು ಮಾಡಲಾಗಿದ್ದು ಈ ವೆಚ್ಚವನ್ನು ವಿಶ್ವವಿದ್ಯಾಲಯಕ್ಕೆ ನಿಗದಿಪಡಿಸಿರುವ ಅಭಿವೃದ್ಧಿ ಅನುದಾನದಲ್ಲಿ ಭರಿಸಲಾಗುತ್ತದೆ.

ANNEXURE - I

LIST OF AGRICULTURAL COLLEGES UNDER THE CONTROL OF U.A.S. DHARWAD.

Sl.No.	Degree Programme	Offered at	Intake
1.	B.Sc. (Agril)	a) Agril. College, Dharwad	110
		b) Agril. College, Raichur	50
		c) Agril. College, Bijapur	50
2.	B.Sc. (Hort)	Kittur Rani Channama Hort. College, Arabhavi	40
3.	B.Sc. (Ag. Maco)	Agril. College, Dharwad	25
4.	B.Sc. (Forestry)	Forestry College, Sirsi	30
5.	B.Tech (Ag.Engg)	College of Agril. Engineering Raichur.	30
6.	B.H.Sc.	Rural Home Science College Dharwad	50
7.	B.V.Sc. & A.H.	Veterinary College, Bidar	44

ANNEXURE - II

LIST OF COLLEGES UNDER THE CONTROL OF UNIVERSITY OF AGRICULTURAL SCIENCES BANGALORE

	Name of the Colleges	Degree Programmes Offered	Total Intake
1)	Agril. College GKVK	B.Sc.(Agril)	100
	GKVK	B.Sc.(Ag. Maco)	25
		B.Tech (Ag.Engg)	20
2)	Agril. College Shimoga	B.Sc.(Agrid)	50
3)	Agril. College Mandya	B.Sc. (Agrid)	50
4)	-do- Hassan	-do-	50
5)	Vety. College Hebbal	B.V.Sc.	60
6)	-do-	B.V.Sc. & A.H.	
7)	Dairy Sci. College, Hebbal	B.Sc. (D.T)	40
	-do-	B.Tech (D.Tech)	-
8)	Fisheries College, M'lore.	B.F.S.	40
9)	Horticultural College, Mudigere	B.Sc. (Hort)	40
10)	Sericultural College, Chintamani	B.Sc. (Seri)	25
11)	Forestry College Ponnampet	B.Sc. (Forestry)	20